**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.123/2024**

ಫ್ರಾ.ಸಾ. 10

ಚಾ.ಸಾ. 8

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 21.01.2026**

ಸಾಕ್ಷಿದಾರರ ಹೆಸರು ಸ್ವಾಮಿ ಅಲಿಯಾಸ್ ಪ್ರಸನ್ನ

ತಂದೆಯ ಹೆಸರು ಸೋಮಣ್ಣ

ವಯಸ್ಸು 39 ವರ್ಷ

ಉದ್ಯೋಗ ಡ್ರೈವರ್ ಕೆಲಸ

ವಾಸ ಕೊಂಗಬೋರನದೊಡ್ಡಿ ಗ್ರಾಮ

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನ್ಯಾಯಾಲಯದ ಮುಂದೆ ಹಾಜರು ಇರುವ 7 ನೇ ಆರೋಪಿಯ ಪರಿಚಯ ನನಗೆ ಇಲ್ಲ. ಚಾಸಾ.1 ರಿಂದ ಚಾಸಾ.4 ರವರು ಕೂಡ ನನಗೆ ಪರಿಚಯ ಇಲ್ಲ. ಮೃತ ರಾಖಿ ಅಲಿಯಾಸ್ ರಾಕೇಶನ ಪರಿಚಯ ಇದೆ. ರಾಕೇಶನಿಗೆ ಚಾಸಾ.1 ಅಣ್ಣ ರಾಕೇಶ 6-7 ವರ್ಷಗಳ ಹಿಂದೆ ಕೊಲೆಯಾಗಿದ್ದಾನೆ. ಆತ ವಡ್ಡರದೊಡ್ಡಿ ಗ್ರಾಮದಲ್ಲಿ ಕೊಲೆಯಾಗಿದ್ದಾನೆ, ಯಾವ ಜಾಗ ಎಂದು ಗೊತ್ತಿಲ್ಲ. ಪೊಲೀಸರು ಈ ಪ್ರಕರಣದ ಬಾಬ್ತು ನನ್ನನ್ನು ವಿಚಾರಣೆ ಮಾಡಿಲ್ಲ. ನ್ಯಾಯಾಲಯದ ಮುಂದೆ ಇರುವ 7 ನೇ ಆರೋಪಿ ರಾಖಿ ಅಲಿಯಾಸ್ ರಾಕೇಶನನ್ನು ಕೊಲೆ ಮಾಡಿದ್ದಾರೆ ಎಂದು ಈ ಪ್ರಕರಣ ದಾಖಲು ಆಗಿರುವ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು

ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

*2.* ನಾನು ದಿನಾಂಕ *23.07.2019* ರಂದು ಪೊಲೀಸರ ಮುಂದೆ ಹೇಳಿಕೆ ನೀಡಿ, ನಾನು, ರಾಕೇಶ, ಮತ್ತು ಚಾಸಾ.*2*, ಚಾಸಾ.*4* ರವರು ಸ್ನೇಹಿತರು, ನಾನು ಲಾರಿ ಡ್ರೈವರ್ ವೃತ್ತಿ ಜೊತೆಗೆ ಮಹೇಂದ್ರ ಫೈನಾನ್ಸ್ ನಲ್ಲಿ ವಾಹನಗಳನ್ನು ಸೀಸ್ ಮಾಡುವ ಕೆಲಸ ಕೂಡ ಮಾಡುತ್ತೇನೆಂದು ಹೇಳಿದ್ದೇನೆಂದರೆ ಸರಿ. ನನ್ನ ಜೊತೆ ವಾಹನ ಸೀಸ್ ಮಾಡಲು ಸುದರ್ಶನ್ ಮತ್ತು ರಾಕೇಶ ಕೂಡ ಆಗಾಗ ಬರುತ್ತಿದ್ದರು ಎಂದು ಕೂಡ ಹೇಳಿದ್ದೇನೆಂದರೆ ಸರಿ.

*3.* ಅಲ್ಲದೇ ನಾನು ಸದರಿ ಹೇಳಿಕೆಯಲ್ಲಿ ರಾಕೇಶನಿಗೂ ಚಳ್ಳಿರೆ ಗೇಟಿನ ವಾಸಿ ಕಪ್ಪೆ ಅಲಿಯಾಸ್ ಮಧುಗೂ ಯಾವುದೋ ವಿಚಾರದಲ್ಲಿ ಮನಸ್ತಾಪ ಇತ್ತು ಆದ್ದರಿಂದ ಇಬ್ಬರಿಗೂ ಆಗುತ್ತಿರಲಿಲ್ಲ ಎಂದು ಹೇಳಿದ್ದೇನೆಂದರೆ ಸರಿ. ಅಲ್ಲದೇ ನಾನು ವಡ್ಡರದೊಡ್ಡಿಯ ಅಭಿ, ಕಪ್ಪೆ, ಅಕ್ಷಯ್, ಸಿದ್ದ, ಧನರಾಜು, ಶಶಿ, ಮಹದೇವ ಇನ್ನೂ ಇತರರು ಒಂದು ಗುಂಪು ಮತ್ತು ನಮ್ಮ ಗುಂಪಿಗೂ ಆಗುತ್ತಿರಲಿಲ್ಲ, ಅಲ್ಲದೇ *4* ವರ್ಷಗಳ ಹಿಂದೆ ಪ್ರಮೋದ ಅಲಿಯಾಸ್ ಕರಿಯನಿಗೂ ಅಭಿ ಅಲಿಯಾಸ್ ಅಭಿಷೇಕ್‌ಗೂ ವಡ್ಡರದೊಡ್ಡಿ ಗ್ರಾಮದಲ್ಲಿ ಪಟಾಕಿ ಹೊಡೆಯುವ ವಿಚಾರದಲ್ಲಿ ಗಲಾಟೆಯಾಗಿ ಪ್ರಮೋದ ಅಭಿಷೇಕ್‌ಗೆ ಚೂರಿಯಿಂದ ಕಿಬ್ಬೊಟ್ಟೆಗೆ ಚುಚ್ಚಿದ್ದ ಈ ಬಾಬ್ತು ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಅಗಿದೆ ಎಂದೂ ಕೂಡ ಹೇಳಿದ್ದೇನೆಂದರೆ ಸರಿಯಲ್ಲ. ಅಂದಿನಿಂದ ನಮ್ಮ ಗುಂಪಿಗೂ ಅಭಿಷೇಕ್ ಗುಂಪಿಗೂ ದ್ವೇಷ ಹೆಚ್ಚಾಗಿ ಒಬ್ಬರಿಗೊಬ್ಬರು ಮಸೆಯುತ್ತಿದ್ದರು ಎಂದೂ ಕೂಡ ಹೇಳಿದ್ದೇನೆಂದರೆ ಸರಿಯಲ್ಲ.

*4.* ದಿನಾಂಕ *20.12.2018* ರಂದು ಚಾಸಾ.*2*, ಮೃತ ರಾಕೇಶ ಮತ್ತು ಇತರರು ಮಧ್ಯರಾತ್ರಿ *1.00* ಗಂಟೆಯ ಸಮಯದಲ್ಲಿ ಚಾಸಾ. *1* ರವರ ಮನೆಯ ಬಳಿ ಹೋಗಿ ಅವರ ತಾಯಿ ಹಾಗೂ ಹೆಂಡತಿ ಜೊತೆ ಗಲಾಟೆ ಮಾಡಿ ಆ ಬಗ್ಗೆ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಆಗಿತ್ತು ಎಂದೂ ಕೂಡ ಹೇಳಿದ್ದೇನೆಂದರೆ ಸರಿಯಲ್ಲ. ಅಂದಿನಿಂದ ಕಪ್ಪೆ ಮತ್ತು ಅಭಿ ಕಡೆಯವರು ನಮ್ಮ ಕಡೆಯವರಲ್ಲಿ ಯಾರನ್ನಾದರೂ ಹೊಡೆದು ಹಾಕಬೇಕು ಎಂದು ಕಾಯುತ್ತಿದ್ದರು, ದಿನಾಂಕ *07.06.2019* ರಂದು ರಾತ್ರಿ *8.45* ಗಂಟೆ ಸಮಯದಲ್ಲಿ ಮುದುಗೆರೆ ಗೇಟ್ ಸಮೀಪ ನಾನು

ಮತ್ತು ಸುದರ್ಶನ್ ಕಾರಿನಲ್ಲಿ ಹೋಗುತ್ತಿದ್ದಾಗ ಕಪ್ಪೆ, ಅಭಿ ಮತ್ತು ಸಂತು ನಮ್ಮನ್ನು ಹೊಡೆದು ಕೊಲೆ ಮಾಡಲು ಪ್ರಯತ್ನಿಸಿ ನಮ್ಮ ಬಳಿ ಇದ್ದ ಹಣವನ್ನು ಕಿತ್ತುಕೊಂಡು ಹೋಗಿದ್ದರು, ಈ ಬಾಬ್ತು ಚನ್ನಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಆಗಿತ್ತು ಎಂದು ಹೇಳಿಕೆ ನೀಡಿದ್ದೇನೆಂದರೆ ಸರಿ.

5. ದಿನಾಂಕ 27.06.2019 ರಂದು ಸಂಜೆ 4.00 ಗಂಟೆಗೆ ಡಾಕ್ಟರ್ ತೋಟದ ಬಳಿ ಬನ್ನಿ ಅಂತ ರಾಖಿಗೆ ಮತ್ತು ಕರಿಯನಿಗೆ ನಾನು ತಿಳಿಸಿದ್ದೆ, ಅದರಂತೆ ಅದೇ ದಿನ ಸಂಜೆ 4.00 ಗಂಟೆಗೆ ಡಾಕ್ಟರ್ ತೋಟದ ಬಳಿ ಮೃತ, ಚಾಸಾ.2 ಮತ್ತು ಚಾಸಾ.4, ಮನು ಅಲ್ಲಿಗೆ ಬಂದಿದ್ದರು, ಎಲ್ಲರೂ ಸೇರಿ ಎಣ್ಣೆ ಕುಡಿದು ಮಾತನಾಡುತ್ತಿದ್ದೆವು, ರಾತ್ರಿ 7.00 ಗಂಟೆ ಸಮಯದಲ್ಲಿ ರಾಕೇ ಮನೆಗೆ ಹೋಗಿ ಊಟ ಮಾಡಿಕೊಂಡು ಹೋಗಿ ಬರುತ್ತೇನೆಂದು ಹೇಳಿ ಚಾಸಾ.4 ರವರು ತಂದಿದ್ದ ಪಲ್ಸರ್ ಮೋಟಾರು ಸೈಕಲ್ ನಲ್ಲಿ ಚಾಸಾ.3 ರವರ ಜೊತೆ ಊರಿಗೆ ಹೋಗಿ ರಾತ್ರಿ 9.30 ಗಂಟೆಗೆ ಚಾಸಾ.3 ಮತ್ತು ಮೃತ ಮತ್ತೆ ತೋಟದ ಬಳಿಗೆ ಅದೇ ಗಾಡಿಯಲ್ಲಿ ಬಂದರು, ನಂತರ ನಾವೆಲ್ಲ ರಾತ್ರಿ 10.45 ಗಂಟೆಯವರೆಗೆ ಮಾತನಾಡುತ್ತಿದ್ದೆವು, ನಂತರ ಚಾಸಾ.2 ರವರು ಊರಿಗೆ ಹೋಗಬೇಕೆಂದು ಹೇಳಿದಾಗ ಮೃತ ಮತ್ತು ಚಾಸಾ.4 ತಂದಿದ್ದ ಕೆಎ–51–ಡಬ್ಲ್ಯೂ–1532 ಮೋಟಾರು ಸೈಕಲ್ ನಲ್ಲಿ ಚಾಸಾ.2 ರವರನ್ನು ಜೊತೆಗೆ ಹಿಂಭಾಗದಲ್ಲಿ ಕುಳ್ಳಿರಿಸಿಕೊಂಡ, ಬಳಿಕ ಚಾಸಾ.3 ಮತ್ತು ಚಾಸಾ.4 ರವರಿಗೆ ಡಿಸ್ಕವರಿ ಮೋಟಾರು ಸೈಕಲ್ ತೆಗೆದುಕೊಂಡು ಬರಲು ಹೇಳಿದ, ನಂತರ ಚಾಸಾ.3 ಮತ್ತು ಚಾಸಾ.4 ನನ್ನ ಬಾಬ್ತು ಕೆಎ–11–ಯು–8064 ಬೈಕಿನಲ್ಲಿ ರಾಕೇಶ ಮತ್ತು ಕರಿಯನ ಹಿಂದೆ ಹೋದರು, ನಾನು ನಾನೇ ತಂದಿದ್ದ ಇನ್ನೊಂದು ಬೈಕಿನಲ್ಲಿ ಮನೆಗೆ ಹೋದೆ ಎಂದೂ ಕೂಡ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ.

6. ಅದೇ ದಿನ ಮಧ್ಯರಾತ್ರಿ 1.30 ಗಂಟೆ ಸಮಯದಲ್ಲಿ ಚಾಸಾ.2 ರಿಂದ ಚಾಸಾ.4 ರವರು ನಮ್ಮ ಮನೆಯ ಬಳಿ ಬಂದು ನನ್ನನ್ನು ಎಬ್ಬಿಸಿ ಚಾಸಾ.2 ರವರು ನನ್ನಲ್ಲಿ, ರಾತ್ರಿ ಸುಮಾರು 11.30 ಗಂಟೆ ಸಮಯದಲ್ಲಿ ಮೃತ ಕೆಎ–51–ಡಬ್ಲ್ಯೂ–1532 ಮೋಟಾರು ಸೈಕಲ್‌ನ ಹಿಂಭಾಗ ನನ್ನನ್ನು ಕರೆದುಕೊಂಡು ಹೋದಾಗ ಆರೋಪಿಗಳು ಕೈಗಳಲ್ಲಿ ಲಾಂಗು, ಡ್ರ್ಯಾಗರ್, ದೊಣ್ಣೆ, ರಾಡು, ಕಲ್ಲುಗಳನ್ನು ಹಿಡಿದುಕೊಂಡು ನಮ್ಮನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿದರು, ಬಳಿಕ 7 ನೇ ಆರೋಪಿ ಮಹದೇವ ಇವರನ್ನು ಬಿಡಬೇಡಿ ಹೊಡೆದು ಮುಗಿಸಿಬಿಡಿ ಎಂದು ಹೇಳಿದ, ಆಗ 1 ನೇ ಅರೋಪಿ ಮೃತನಿಗೆ ನೀನು ಚಾಸಾ.2 ಗೆ ಸಪೋರ್ಟ್‌ಮಾಡಿ ನಮ್ಮ ಮೇಲೆ ಗಲಾಟೆ ಮಾಡಿ ನನಗೆ ಚಾಕು ಹಾಕಲು ಬರುತ್ತೀರಾ ಇವತ್ತು ನಿಮ್ಮನ್ನೇ ಮುಗಿಸುತ್ತೇನೆಂದು ಹೇಳಿ 1 ನೇ ಆರೋಪಿ ಮೃತ ರಾಖಿಗೆ ಲಾಂಗ್ ನಿಂದ ಕತ್ತಿಗೆ ಹೊಡೆದ, 2 ಮತ್ತು 3 ನೇ ಆರೋಪಿಗಳು ಚಾಸಾ.2 ರವರಿಗೆ ಹೊಡೆಯಲು ಓಡಿಸಿಕೊಂಡು ಬಂದರು ಆಗ ಚಾಸಾ.2 ಓಡಿ ಹೋದ ಎಂದು ನನ್ನಲ್ಲಿ ಚಾಸಾ.2 ಹೇಳಿದ

ಎಂದರೆ ಸರಿಯಲ್ಲ. ಅಲ್ಲದೇ ಅವನು ಸ್ವಲ್ಪ ಸಮಯದ ಬಳಿಕ ರೈಲ್ವೆ ಗೇಟ್ ಬಳಿ ಬಂದಾಗ ಅಲ್ಲಿ ನನಗೆ ಚಾಸಾ.3 ಮತ್ತು ಚಾಸಾ.4 ರವರು ಅವನಿಗೆ ಸಿಕ್ಕಿ ಚಾಸಾ.4 ರವರಿಗೆ ಯಾರೋ ಇಬ್ಬರು ನಮ್ಮಗಳನ್ನು ಓಡಿಸಿಕೊಂಡು ಬಂದು ಒಬ್ಬ ಲಾಂಗ್ ನಿಂದ ಚಾಸಾ.4 ಗೆ ತಲೆಗೆ ಹೊಡೆದನು, ಇನ್ನೊಬ್ಬ ರಾಡಿನಿಂದ ಚಾಸಾ.3 ಗೆ ಕಾಲಿಗೆ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದರು, ನಾವು ಅವರಿಂದ ತಪ್ಪಿಸಿಕೊಂಡು ಬಂದೆವು ಎಂದು ಚಾಸಾ.3 ಮತ್ತು ಚಾಸಾ.4 ರವರು ಚಾಸಾ.2 ರವರಲ್ಲಿ ಹೇಳಿದರು ಎಂದು ನನ್ನಲ್ಲಿ ಚಾಸಾ.2 ರವರು ಹೇಳಿದರು ಎಂದರೆ ಸರಿಯಲ್ಲ.

7. ಮರುದಿನ ಬೆಳಗ್ಗೆ ರಾಕೇಶ ಸತ್ತು ಹೋದ ವಿಚಾರ ಗೊತ್ತಾಯಿತು, ಆರೋಪಿಗಳೆಲ್ಲರೂ ನಮ್ಮ ಮೇಲಿನ ದ್ವೇಷದಿಂದ ರಾಕೇಶನನ್ನು ಕೊಲೆ ಮಾಡಿದ್ದಾರೆಂದೂ ಕೂಡ ಪೊಲೀಸರಲ್ಲಿ ಹೇಳಿದ್ದೇನೆಂದರೆ ಸರಿಯಲ್ಲ. ಅಲ್ಲದೇ ಚಾಸಾ.2 ರಿಂದ ಚಾಸಾ.4 ರವರನ್ನು ಕೊಲೆ ಮಾಡಲು ಪ್ರಯತ್ನಿಸಿದರು ಎಂದೂ ಕೂಡ ಪೊಲೀಸರಲ್ಲಿ ಹೇಳಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ದಿನಾಂಕ 23.07.2019 ರಂದು ನೀಡಿದ್ದು ಎಂದು ಹೇಳಲಾದ ಹೇಳಿಕೆಯ ಅಂಶಗಳನ್ನು ನಿರಾಕರಿಸಿದ ಕಾರಣ ಅದರ ಹೇಳಿಕೆಯನ್ನು ನಿಪಿ.17 ಎಂದು ಗುರುತಿಸಲಾಯಿತು.

8. ನಾನು, ಮೃತ ರಾಕೇಶ, ಚಾಸಾ.2 ರಿಂದ ಚಾಸಾ.4 ಒಂದು ಗುಂಪು ಎಂದರೆ ಸರಿ. 1ನೇ ಆರೋಪಿ ಮತ್ತು ಉಳಿದ ಆರೋಪಿಗಳದ್ದು ಒಂದು ಗುಂಪು ಎಂದರೆ ಸರಿ. ಮೃತನ ಗುಂಪಿಗೂ 1ನೇ ಆರೋಪಿಯ ಗುಂಪಿಗೂ ಮಧ್ಯ ದ್ವೇಷ ಇತ್ತು ಎಂದರೆ ಸರಿ. ನಿಪಿ.17ರ ಅಂಶಗಳನ್ನು ಒಪ್ಪಿಕೊಂಡರೆ ಆರೋಪಿಗಳಿಗೆ ಶಿಕ್ಷೆ ಆಗುತ್ತದೆಂದು ಆ ರೀತಿ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 7ನೇ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.